ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : **2020**

ಮಾನ್ಯ ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : **27-03-2020**

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ದೇವದಾಸಿ ಪುನರ್ವಸತಿ ಯೋಜನೆಯ ಅನ್ವಯ ಕೈಗೊಂಡ ಕಾರ್ಯಕ್ರಮಗಳೇನು; ಕಳೆದ 5 ವರ್ಷಗಳಲ್ಲಿ ಎಷ್ಟು ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸಲಾಗಿದೆ; ದೇವದಾಸಿಯರ ಜೀವನೋಪಾಯಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಾಜಿ ದೇವದಾಸಿಯರ ಪುನರ್ವಸತಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1. ದೇವದಾಸಿ ಪುನರ್ವಸತಿ ಯೋಜನೆ 2. ಮಾಜಿ ದೇವದಾಸಿಯರ ಮಾಸಾಶನ ಯೋಜನೆ 3. ಮಾಜಿ ದೇವದಾಸಿಯರ ವಸತಿ ಯೋಜನೆ. ಕಳೆದ 5 ವರ್ಷಗಳಲ್ಲಿ ಒಟ್ಟು 10,421 ಮಾಜಿ ದೇವದಾಸಿಯರ ಜೀವನೋಪಾಯಕ್ಕೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹಧನ ಹಾಗೂ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. 45 ವರ್ಷ ಮೀರಿದ ಎಲ್ಲಾ ಮಾಜಿ ದೇವದಾಸಿಯರಿಗೆ ಪ್ರತಿ ಮಾಹೆ ರೂ.1500/-ಗಳಂತೆ ಮಾಸಾಶನವನ್ನು ಒಟ್ಟು 29,791 ಮಾಜಿ ದೇವದಾಸಿಯರಿಗೆ ನೀಡಲಾಗುತ್ತಿದೆ. ಜಿಲ್ಲಾವಾರು ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.
ಆ.	ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆ ಎಷ್ಟು; ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಕೈಗೊಂಡ ಕ್ರಮಗಳೇನು;	ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆಯ ಮಾಹಿತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಿದೆ. ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕ-2009 ರಡಿಯಲ್ಲಿ ಕಾನೂನಾತ್ಮಕ ಕ್ರಮಕೈಗೊಳ್ಳಲಾಗುತ್ತಿದೆ. ಈ ಕಾಯ್ದೆಯ ಅನ್ವಯ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಜನಜಾಗೃತಿ ಮೂಡಿಸುವ ಸಲುವಾಗಿ ಜಾತ್ರಾ ಜಾಗೃತಿ, ಬೀದಿ ನಾಟಕಗಳು ಮತ್ತು ಕಾನೂನು ಅರಿವು ಕಾರ್ಯಕ್ರಮಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಇದಲ್ಲದೇ ಮಾಜಿ ದೇವದಾಸಿ ಮಹಿಳೆಯರ ಆರೋಗ್ಯ ದೃಷ್ಟಿಯಿಂದ ಆರೋಗ್ಯ ತಪಾಸಣಾ ಶಿಬಿರಗಳನ್ನು ಸಹ ಹಮ್ಮಿಕೊಳ್ಳಲಾಗುತ್ತದೆ.

ಇ.	ಮಾಜಿ ದೇವದಾಸಿಯರಿಗೆ ವಸತಿ ಯೋಜನೆಯ ಅನ್ವಯ ಇದುವರೆಗೆ ಎಷ್ಟು ಮನೆಗಳನ್ನು ವಿತರಿಸಲಾಗಿದೆ; ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ;(ಜಿಲ್ಲಾವಾರು ವಿವರ ನೀಡುವುದು).	ನಿವೇಶನವುಳ್ಳ ವಸತಿರಹಿತ ಮಾಜಿ ದೇವದಾಸಿಯರಿಗೆ ವಸತಿ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮೂಲಕ 12,412 ಮಾಜಿ ದೇವದಾಸಿ ಮಹಿಳೆಯರಿಗೆ ವಸತಿ ಸೌಲಭ್ಯವನ್ನು ವಿತರಿಸಲಾಗಿದೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ.

ಕ್ರಸಂ	ಜಿಲ್ಲೆ	ಕ.ರಾ.ಮ.ಅ.ನಿಗಮದಿಂದ ಸೌಲಭ್ಯ ಪಡೆದ ಮಾಜಿ ದೇವದಾಸಿ ಮಹಿಳೆಯರು
1	ವಿಜಯಪುರ	1604
2	ಬಾಗಲಕೋಟೆ	1124
3	ಬೆಳಗಾವಿ	563
4	ಬಳ್ಳಾರಿ	2023
5	ಕೊಪ್ಪಳ	1896
6	ರಾಯಚೂರು	2141
7	ಯಾದಗಿರಿ	610
8	ಕಲಬುರ್ಗಿ	624
9	ಗದಗ	556
10	ಧಾರವಾಡ	223
11	ಹಾವೇರಿ	274
12	ಚಿತ್ರದುರ್ಗ	97
13	ಶಿವಮೊಗ್ಗ	7
14	ದಾವಣಗೆರೆ	169
	ಒಟ್ಟು	**11,911**

ಈ.	ಮಾಜಿ ದೇವದಾಸಿಯರಿಗೆ ಕನಿಷ್ಠ ರೂ.5000 ಮಾಸಾಶನ ನೀಡುವ ಕುರಿತು ಸರ್ಕಾರದ ಮುಂದೆ ಯೋಜನೆಗಳಿವೆಯೇ;	2020-21ನೇ ಸಾಲಿಗೆ ಮಾಜಿ ದೇವದಾಸಿಯರಿಗೆ ಮಾಸಾಶನವನ್ನು ರೂ.1500/- ಗಳಿಂದ ರೂ.2000/- ಗಳಿಗೆ ಹೆಚ್ಚಿಸುವ ಕುರಿತಾದ ಪ್ರಸ್ತಾವನೆ ಆರ್ಥಿಕ ಇಲಾಖೆಯಿಂದ ತಿರಸ್ಕೃತವಾಗಿದೆ.

ಸಂಖ್ಯೆ:ಮಮಇ/20/ಮಅನಿ 2020

(ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಅನುಬಂಧ-1

ಮಾಜಿ ದೇವದಾಸಿಯರ ಜೀವನೋಪಾಯಕ್ಕೆ ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹಧನ, ಸಾಲ ಸೌಲಭ್ಯವನ್ನು ಒದಗಿಸಿದ ವಿವರ

ಕ್ರ.ಸಂ	ಜಿಲ್ಲೆ	ಆದಾಯೋತ್ಪನ್ನಕರ ಚಟುವಟಿಕೆ ಕೈಗೊಳ್ಳಲು ಪ್ರೋತ್ಸಾಹಧನ, ಸಾಲ ಸೌಲಭ್ಯದ ವರ್ಷವಾರು ವಿವರ				
		2014-15	2015-16	2016-17	2017-18	2018-19
1	ರಾಯಚೂರು	199	290	400	60	39
2	ಕೊಪ್ಪಳ	153	232	210	80	125
3	ಬಳ್ಳಾರಿ	600	846	689	367	510
4	ಕಲಬುರ್ಗಿ	130	277	160	21	13
5	ಯಾದಗಿರಿ	122	225	125	14	10
6	ವಿಜಯಪುರ	73	193	225	78	76
7	ಬೆಳಗಾವಿ	154	280	170	75	13
8	ದಾವಣಗೆರೆ	222	97	217	98	3
9	ಶಿವಮೊಗ್ಗ	5	3	2	0	0
10	ಚಿತ್ರದುರ್ಗ	82	35	35	2	2
11	ಬಾಗಲಕೋಟೆ	270	356	300	209	226
12	ಧಾರವಾಡ	95	65	85	19	0
13	ಗದಗ	162	109	90	20	5
14	ಹಾವೇರಿ	94	70	85	20	4
		2361	**3078**	**2793**	**1063**	**1126**
					ಒಟ್ಟು :	**10421**

ಅನುಬಂಧ-2

ಮಾಜಿ ದೇವದಾಸಿಯರ ಜೀವನೋಪಾಯಕ್ಕೆ ಮಾಸಾಶನ ಸೌಲಭ್ಯವನ್ನು ಒದಗಿಸಿದ ವಿವರ

ಕ್ರ.ಸಂ	ಜಿಲ್ಲೆ	ಮಾಸಾಶನ ನೀಡಲಾಗುತ್ತಿರುವ ಮಾಜಿ ದೇವದಾಸಿಯರ ಸಂಖ್ಯೆ
1	ರಾಯಚೂರು	2837
2	ಕೊಪ್ಪಳ	2961
3	ಬಳ್ಳಾರಿ	7940
4	ಕಲಬುರ್ಗಿ	989
5	ಯಾದಗಿರಿ	833
6	ವಿಜಯಪುರ	2438
7	ಬೆಳಗಾವಿ	3182
8	ದಾವಣಗೆರೆ	1684
9	ಶಿವಮೊಗ್ಗ	19
10	ಚಿತ್ರದುರ್ಗ	226
11	ಬಾಗಲಕೋಟೆ	4726
12	ಧಾರವಾಡ	453
13	ಗದಗ	990
14	ಹಾವೇರಿ	453
	ಒಟ್ಟು:	**29791**

ಅನುಬಂಧ-3

ಪ್ರಸ್ತುತ ರಾಜ್ಯದಲ್ಲಿರುವ ಮಾಜಿ ದೇವದಾಸಿಯರ ಸಂಖ್ಯೆಯ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆ	1993-94ನೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟವರು	2007-08ನೇ ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟವರು	ಒಟ್ಟು ಮಾಜಿ ದೇವದಾಸಿಯವರು	ಇದುವರೆಗೂ ಮರಣ ಹೊಂದಿದವರ ಸಂಖ್ಯೆ	ಜೀವಂತವಾಗಿರುವವರ ಸಂಖ್ಯೆ
1	ರಾಯಚೂರು	2494	1455	3949	971	2978
2	ಕೊಪ್ಪಳ	4880	1155	6035	2233	3802
3	ಬಳ್ಳಾರಿ	1635	9080	10715	904	9811
4	ಕಲಬುರ್ಗಿ	581	864	1445	246	1199
5	ಯಾದಗಿರಿ	410	759	1169	165	1004
6	ವಿಜಯಪುರ	1964	2139	4103	754	3349
7	ಬೆಳಗಾವಿ	3600	1124	4724	1178	3546
8	ದಾವಣಗೆರೆ	0	1610	1610	468	1142
9	ಶಿವಮೊಗ್ಗ	0	24	24	2	22
10	ಚಿತ್ರದುರ್ಗ	0	406	406	150	256
11	ಬಾಗಲಕೋಟೆ	4804	3023	7827	1060	6767
12	ಧಾರವಾಡ	481	282	763	219	544
13	ಗದಗ	1407	1493	2900	1887	1013
14	ಹಾವೇರಿ	617	373	990	333	657
	ಒಟ್ಟು	**22873**	**23787**	**46660**	**10570**	**36090**

******